ಸವಿ ಸವಿ ನೆನಪು..

# ದೇವರ ನಾಡಿನಲ್ಲಿ; ನೆನಪುಗಳ ಭಿತ್ತಿಯಲ್ಲಿ..

ಕರ್ನಾಟಕದಲ್ಲಿ ಸವಿ ಸವಿಯಾಗಿ ಬಾಯಿ ಚಪ್ಪರಿಸುತ್ತಿದ್ದ ನಮಗೆ ಅಲ್ಲಿನ ಊಟ ರುಚಿಸುತ್ತಿರಲಿಲ್ಲ. ಏಕೆಂದರೆ ಎಲ್ಲೆಡೆ ಟೀ ಶಾಪ್, ಬೇಕರಿ ಬಿಟ್ಟರೆ ಮಾಂಸಾಹಾರಿ ಹೋಟೆಲ್‌ಗಳೇ. ಕೆಲವೇ ವೆಜ್ ಹೋಟೆಲ್‌ಗಳಲ್ಲಿಯೂ ಗೊಡ್ಡು ಊಟ. ಊಟಕ್ಕೆ ಮುನ್ನ ಪಾಯಸ! ಅರ್ಧ ಡಜನ್ ನೇಂದ್ರ ಬಾಳೆ ತಿಂದೇ ಮಲಗಿ ಬಿಡುತ್ತಿದ್ದೆವು.

**ಚಿತ್ರ-ಬರಹ: ಕೆ.ಶ್ರೀನಿವಾಸರಾವ್**



ಬದುಕಿನ ಏಕತಾನತೆ ಮರೆಸಲು, ಮನಸ್ಸಿಗೆ ನೆಮ್ಮದಿ ನೀಡಲು ಪ್ರವಾಸ ಸಹಕಾರಿ. ಕೈಗೊಂಡ ಕೆಲವು ಪ್ರವಾಸಗಳು ನಮ್ಮ ನೆನಪಿನ ಭಿತ್ತಿಯಲ್ಲಿ ಸದಾ ಅಚ್ಚೊತ್ತಾಗಿ ನಿಲ್ಲುತ್ತದೆ. ನೆನಪುಗಳು ಕಚಗುಳಿ ಇಡುತ್ತವೆ, ಸವಿಯಾದ ಈ ನೆನಪುಗಳನ್ನು ಮತ್ತೆ ಮತ್ತೆ ಮೆಲುಕು ಹಾಕುವುದರಲ್ಲೇ ಮನಸ್ಸು ಮುದಗೊಳ್ಳುತ್ತದೆ.

ನಾನು ಪ್ರವಾಸಪ್ರಿಯ. ಆದರೇನು, ಕೈಯಿಟ್ಟಿದ್ದು 24 ಗಂಟೆಗಳೂ ತಲೆ ಬಿಸಿಯ ಹೋಟೆಲ್ ಉದ್ಯಮಕ್ಕೆ. ಎಲ್ಲಿಯೂ ಹೋಗುವಂತಿಲ್ಲ. ಉದ್ಯಮ ಕೈಹಿಡಿದಿತ್ತು. ವರ್ಷಗಳಾದಂತೆ ತಲೆ ಕೆಡಲಾರಂಭಿಸಿತ್ತು. ಯಾವಾಗಲೂ ಜನವೋ ಜನ, ಕೆಲಸಗಾರರ ಕಿರಿಕಿರಿ, ಸರ್ಕಾರದ ವಿಚಿತ್ರ ಕಾನೂನುಗಳು. ಕೊನೆಗೆ ಬೇಸತ್ತು ಉದ್ಯಮವನ್ನು ಮತ್ತೊಬ್ಬರಿಗೆ ವಹಿಸಿಕೊಟ್ಟು ಮಗನಿಗೊಂದು ಬೇಕರಿ ಮಾಡಿಕೊಟ್ಟು ನಿಟ್ಟುಸಿರುಗರೆದಾಗ ನೆನಪಾಯಿತು. ಅರೇ! ಈಗಲಾದರೂ ಒಂದು ಒಳ್ಳೆಯ ಹೊರ ರಾಜ್ಯದ ಪ್ರವಾಸ ಮಾಡಬೇಕಲ್ಲ?

ನನ್ನ ನಾಲ್ಕು ಜನ ತಂಗಿಯರು, ಭಾವಂದಿರು ಮತ್ತು ಧರ್ಮಪತ್ನಿಯೊಂದಿಗೆ ಖಾಸಗಿ ಟ್ರಾವೆಲ್ಸ್‌ನಲ್ಲಿ 12 ಸೀಟು ನಾವೇ ಆಕ್ರಮಿಸಿ 2010ರ ಮೇ 23ರ ಬೆಳಿಗ್ಗೆ ಕೇರಳ ಪ್ರವಾಸ ಹೊರಟೇ ಬಿಟ್ಟೆವು. ಅದೊಂದು ಸುಂದರ ಅನುಭವ, ಇಡೀ ಬಸ್ಸಿನಲ್ಲಿ ನಮ್ಮದೇ ಕೂಗಾಟ, ಹಾಡು, ಹಸೆ, ಜೋಕ್ಸ್, ಟೀಂ ಮ್ಯಾನೇಜರ್ ಪ್ರಾಯೋಜಿಸಿದ ಸ್ಪರ್ಧೆಗಳಲ್ಲಿ ನಮ್ಮದೇ ಬಹುಮಾನದ ಪ್ರಾಬಲ್ಯ.

ವಯನಾಡು, ಗುರುವಾಯೂರು, ತೇಕಡಿ, ನಡುಮುಡಿ, ಅಲೆಪ್ಪಿ, ಕೊಚ್ಚಿನ್, ಎರ್ನಾಕುಲಂ, ಮಲ್ಲಪುಳಾ ಡ್ಯಾಂ, ತಲಕ್ಕಾಡು ಒಂದಕ್ಕಿಂತ ಒಂದು ಚೆಂದವೋ ಚೆಂದ. ಅದರಲ್ಲೂ ಗುರುವಾಯೂರಿನ ಪ್ರಶಾಂತವದನ ಶ್ರೀ ಕೃಷ್ಣ ಕಣ್ಮನ ತಣಿಸಿದ್ದ. ದೇಗುಲದ 64 ಆನೆಗಳ ಬೀಡು ಆನೇಕೋಟೆ ಸಂದರ್ಶಿಸಲೇ ಬೇಕಾದ ಸ್ಥಳ. ಮಲ್ಲಪುಳಾ ಡ್ಯಾಮ್‌ನ ಮೇಲೆ ಸಾಗುವ ರೋಪ್‌ವೇನಲ್ಲಿ ಸಾಗುವಾಗ ಒಮ್ಮೆ ಜೀವ ಹಾರಿ ಪುನಃ ಬಂದಿತ್ತು.

ಕೇರಳದಲ್ಲಿ ಸಿಗ್ನಲ್‌ಗಳೇ ಅತಿ ವಿರಳ. ನೋ ಟ್ರಾಫಿಕ್! ಉತ್ತಮ ವಸತಿ ಗೃಹಗಳು ಸ್ನೇಹಶೀಲ ಜನರು, ಎತ್ತ ನೋಡಿದರೂ ಗುಡ್ಡದ ಇಳಿಜಾರಿನಲ್ಲಿ ಟೀ ತೋಟಗಳು. ಹಬ್ಬಿದಾ ಹರಿದ್ವರ್ಣದ ಮಧ್ಯೆ ಮುಗಿಲೆತ್ತರದ ಮರಗಳು, ಕೆಳಗೆ ಹೆಬ್ಬಾವೇ ಮಲಗಿದೆಯೇನೋ ಎಂಬಂತಹ ಅಂಕುಡೊಂಕು ರಸ್ತೆಗಳು, ವಾಹ್, ದೇವರನಾಡೇ!

ವಿಚಿತ್ರವೆಂದರೆ ಕೇರಳ ‘ಬ್ಲ್ಯಾಕ್’ ಬಗ್ಗೆ ತುಂಬಾ ಜನಪ್ರಿಯವಂತೆ, ಉದಾಹರಣೆಗೆ ಬ್ಲ್ಯಾಕ್ ಟೀ (ಬರೀ ಟೀ ಡಿಕಾಕ್ಷನ್), ಬ್ಲ್ಯಾಕ್ ಮ್ಯಾಜಿಕ್ (ಮಾಟ, ಮಂತ್ರ), ಬ್ಲ್ಯಾಕ್ ಮನಿ (ದುಬೈ ಹಣ), ಬ್ಲ್ಯಾಕ್ ಡ್ರೆಸ್ (ಅಯ್ಯಪ್ಪ ಭಕ್ತರು). ಕರ್ನಾಟಕದಲ್ಲಿ ಸವಿ ಸವಿಯಾಗಿ ಬಾಯಿ ಚಪ್ಪರಿಸುತ್ತಿದ್ದ ನಮಗೆ ಅಲ್ಲಿನ ಊಟ ರುಚಿಸುತ್ತಿರಲಿಲ್ಲ. ಏಕೆಂದರೆ ಎಲ್ಲೆಡೆ ಟೀ ಶಾಪ್, ಬೇಕರಿ ಬಿಟ್ಟರೆ ಮಾಂಸಾಹಾರಿ ಹೋಟೆಲ್‌ಗಳೇ. ಕೆಲವೇ ವೆಜ್ ಹೋಟೆಲ್‌ಗಳಲ್ಲಿಯೂ ಗೊಡ್ಡು ಊಟ. ಊಟಕ್ಕೆ ಮುನ್ನ ಪಾಯಸ! ಅರ್ಧ ಡಜನ್ ನೇಂದ್ರ ಬಾಳೆ ತಿಂದೇ ಮಲಗಿ ಬಿಡುತ್ತಿದ್ದೆವು.

ಒಟ್ಟಾರೆ ಒಂದು ವಾರದ ಕೇರಳ ಪ್ರವಾಸ ನನ್ನ ಪ್ರವಾಸದ ಸುಪ್ತ ಹಸಿವನ್ನು ತಕ್ಕಮಟ್ಟಿಗೆ ತಣಿಸಿ ಮನೋಲ್ಲಾಸ ನೀಡಿತ್ತು. ಆ ಸವಿ ಸವಿ ನೆನಪು ಇಂದಿಗೂ ನನ್ನ ಭಿತ್ತಿಯಲ್ಲಿ ಹಸಿರಾಗಿದ್ದು ಆಗಾಗ ರಿವೈಂಡ್ ಆಗುತ್ತಲೇ ಇರುತ್ತದೆ.